## ಭದ್ರಾವತಿಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ.

**ಸಿ.ಸಿ.ಸಂಖ್ಯೆ 3295/2023**

ಫಿರ್ಯಾದಿಃ ಹೊಳೆಹೊನ್ನೂರು ಪೊಲೀಸ್ ಠಾಣೆ, ಭದ್ರಾವತಿ.

**– ವಿರುದ್ಧ –**

ಆರೋಪಿತರುಃ ಭಾರ್ಗವ.

**ದೋಷಾರೋಪಣೆ**

ನಾನು ಮಹಮ್ಮದ ಅಲಿ ನಾಯಕ., ಬಿ.ಬಿ.ಎ.,ಎಲ್‌ಎಲ್.ಬಿ. 1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ ದಂಡಾಧಿಕಾರಿಗಳಾದ ನಾನು, ಈ ಮೂಲಕ ಆರೋಪಿಯಾದ ನಿಮ್ಮ ಮೇಲೆ ಅಂದರೆ,

ಭಾರ್ಗವ ಬಿನ್ ಪರಶುರಾಮಪ್ಪ, 35 ವರ್ಷ,
ವಾಸಃ ಹಾರೋಬೆನವಳ್ಳಿ ಗ್ರಾಮ, ಶಿವಮೊಗ್ಗ ತಾಲ್ಲೂಕು.

**ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ–**

ದಿನಾಂಕಃ 01.05.2023 ರಂದು ರಾತ್ರಿ 9 ಗಂಟೆ ಸಮಯದಲ್ಲಿ ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಶಿವಮೊಗ್ಗ ತಾಲ್ಲೂಕು ಹಾರೋಬೆನವಳ್ಳಿ ಗ್ರಾಮದ ವಾಸಿಯಾದ ಶ್ರೀಮತಿ ನೇತ್ರಾವತಿ ಕೋಂ ಕೃಷ್ಣಮೂರ್ತಿರವರ ಮನೆಯ ಮುಂಭಾಗದ ರಸ್ತೆಯಲ್ಲಿ ಆರೋಪಿಯಾದ ನೀವು ಚಾಸಾ.1 ರವರ ಮನೆಯ ಹತ್ತಿರ ಹೋಗಿ ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿದ್ದರಿಂದ ನೀವುಗಳು ಭಾ.ದಂ.ಸಂ.ಕಲಂ. 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

2 ನೇಯದಾಗಿ ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಯಾದ ನೀವು ಚಾಸಾ.1 ರವರ ತಲೆ ಕೂದಲು ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟಾಗುವಂತೆ ಮಾಡುವುದರ ಮೂಲಕ ಭಾ.ದಂ.ಸಂ.ಕಲಂ. 354 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

3 ನೇಯದಾಗಿ ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಯಾದ ನೀವು ಚಾಸಾ.1 ರವರಿಗೆ ಕಾಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ

ನೋವುಂಟು ಮಾಡುವುದರ ಮೂಲಕ ಭಾ.ದಂ.ಸಂ.ಕಲಂ. 323ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

4ನೇಯದಾಗಿ ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ.1ರವರ ಬೆನ್ನಿಗೆ, ಮೈಕೈಗೆ ಹೊಡೆದಿದ್ದು, ನಂತರ ಜಗಳ ಬಿಡಿಸಲು ಬಂದ ಚಾಸಾ.4 ಮತ್ತು 5ರವರನ್ನು ದೂಡಾಡಿ ದೊಣ್ಣೆಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡುವುದರ ಮೂಲಕ ಭಾ.ದಂ.ಸಂ.ಕಲಂ.324ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

5ನೇಯದಾಗಿ ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ.1ರವರ ಜೀವ ಬೆದರಿಕೆ ಹಾಕುವುದರ ಮೂಲಕ ಭಾ.ದಂ.ಸಂ.ಕಲಂ.506ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**(ಆರೋಪಿಯಾದ ನೀವು ಮೇಲ್ಕಂಡ ಅಪರಾಧಗಳಿಗೆ ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ)**

ದಿನಾಂಕಃ11.10.2023

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಭದ್ರಾವತಿ.